ಆ) ಹಾಲಿ ಯೋಜನೆ 1,70,000 ಜನ ಸಂಖ್ಯೆಗೆ ರೂಪಿಸಲಾಗಿದ್ದು, ಈ ಮಟ್ಟ ಇನ್ನೂ ಮೀರಿಲ್ಲ. ನಗರದ ಜನಸಂಖ್ಯೆ 1,70,000 ಮೀರಿದ ನಂತರ ಎರಡನೇ ಹಂತದ ಯೋಜನೆ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಇ) ಈ ನಗರಕ್ಕೆ ಒಳಚರಂಡಿ ಯೋಜನೆಗೆ 980.00 ಲಕ್ಷ ರೂ. ಅಂದಾಜಿಗೆ 1995ರಲ್ಲಿ ತಾತ್ವಿಕ ಅನುಮೋದನೆ ನೀಡಿದ್ದು, ನಗರ ಸಭೆಯೂ ಅಂದಾಜಿನ ಶೇಕಡ 25 ರಷ್ಟನ್ನು ಭರಿಸಿದ ನಂತರ ಆಡಳಿತಾತ್ಮಕ ಅನುಮೋದನೆ ನೀಡುವ ಷರತ್ತನ್ನು ಹಾಕಲಾಗಿದೆ.

ಈ) ಪರಿಷ್ಕೃತ ಅಂದಾಜಿನ ವಂತಿಕೆ ಮೊತ್ತ 1/4 ಭಾಗ ಮೊಬಲಗು ರೂ. 311.25 ಲಕ್ಷ ನಗರಸಭೆ ಭರಿಸಬೇಕಾಗುತ್ತದೆ.

ಉ) ಹಣಕಾಸಿನ ಪರಿಸ್ಥಿತಿಯನ್ನು ಅವಲಂಭಿಸಿ ಈ ಯೋಜನೆಯನ್ನು ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗುವುದು.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಅಲ್ಪಸಂಖ್ಯಾತರಿಗೆ ಬಿಡುಗಡೆಯಾದ ಮೊತ್ತ

470 (865) ಶ್ರೀ ಎಸ್. ರಾಜೇಂದ್ರನ (ಕೆ.ಜಿ.ಎಫ್):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳಿಗೆ ಡಿಸೆಂಬರ್ 94 ರಿಂದ ಇಂದಿನವರೆಗೆ ಬಿಡುಗಡೆ ಮಾಡಿರುವ ಹಣ ಎಷ್ಟು?

ಆ) ಈ ಪೈಕಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಅಲ್ಪಸಂಖ್ಯಾತರ ಸ್ವಯಂ ಸೇವಾ ಸಂಸ್ಥೆಗಳಿಗೆ ಬಿಡುಗಡೆ ಮಾಡಿರುವ ಮೊತ್ತವೆಷ್ಟು?

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆಯಿಂದ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳಿಗೆ ಡಿಸೆಂಬರ್ 1994 ರಿಂದ ಇಲ್ಲಿಯವರೆಗೆ 184.793 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಅಲ್ಪಸಂಖ್ಯಾತರ ಸ್ವಯಂ ಸೇವಾ ಸಂಸ್ಥೆಗಳಿಗೆ ಕೆಳಕಂಡಂತೆ ಹಣ ಬಿಡುಗಡೆ ಮಾಡಲಾಗಿದೆ.

1.	ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಸ್ವಯಂ ಸೇವಾ ಸಂಸ್ಥೆಗಳು	- 31.31 ಲಕ್ಷ
2.	ಅಲ್ಪಸಂಖ್ಯಾತರ ಸ್ವಯಂ ಸೇವಾ ಸಂಸ್ಥೆಗಳು	- 86.25
	ಒಟ್ಟು	118.56 ಲಕ್ಷಗಳು